18

# ಆತ್ಮದಿಂದಲೂ ಸತ್ಯದಿಂದಲೂ ಕರ್ತನ ಭೋಜನ

ಯೇಸುವಿನ ಪ್ರಕಾರವಾಗಿ ದೇವರ ಕಡೆಗಿರುವ ಆರಾಧನೆಯು ಎರಡು ಅರ್ಹತೆಗಳನ್ನು ಹೊಂದಿರಬೇಕು. ಅದು ಆತ್ಮದಿಂದಲೂ ಸತ್ಯದಿಂದಲೂ ಮಾಡಬೇಕು. ಯಾವುದಾದರೂ ಸತ್ಯದಿಂದ ಮಾಡಬೇಕು ಅಂದರೆ ಅದು ಸತ್ಯಕ್ಕನುಗುಣವಾಗಿ ಇಲ್ಲವೇ ದೇವರ ವಾಕ್ಯಕ್ಕನುಗುಣವಾಗಿ ಮಾಡಬೇಕು (ಯೋಹಾನ 17:17). "ಆತ್ಮದಿಂದ" ಅಂದರೆ ಯೋಗ್ಯ ಮನೋಭಾವನೆಯಿಂದ ಇಲ್ಲವೇ ಮನಃ ಸ್ಥಿತಿಯಿಂದ ಎಂದು ಅರ್ಥವಾಗುತ್ತದೆ. ಈ ತತ್ವಗಳು - ಸರಿಯಾದ ತತ್ವಗಳು ಸರಿಯಾದ ರೀತಿಯಲ್ಲಿ ಮಾಡಲ್ಪಡುವವುಗಳು - ಆರಾಧನೆಯ ಪ್ರತಿಯೊಂದು ಕಾರ್ಯಕ್ಕೆ ಅನ್ವಯಿಸಲ್ಪಡಬೇಕು. ಹೀಗಿದ್ದರೂ ಈ ಪಾಠವನ್ನು ನಾವು ಆರಾಧನೆಯ ಒಂದು ಭಾಗಕ್ಕೆ ಪ್ರತ್ಯೇಕವಾಗಿ ಅನ್ವಯಿಸುವೆವು: ಅದು ಕರ್ತನ ಭೋಜನ.

## ಸತ್ಯದಲ್ಲಿ

ಕರ್ತನ ಭೋಜನದಲ್ಲಿ ಪಾಲುಗಾರರಾಗುವದರ ಬಗ್ಗೆ ದೇವರ ವಾಕ್ಯವು ಏನನ್ನು ಬೋಧಿಸುತ್ತದೆ?

ಮೊದಲನೆಯದು, ಕರ್ತನ ಭೋಜನವನ್ನು ಆಚರಿಸಬೇಕೆಂದು ಅದು ಬೋಧಿಸುತ್ತದೆ. ಈ ಆತ್ಮಿಕ ಭೋಜನದ ಮುಖ್ಯತ್ವವು ಕರ್ತನಿಂದ ಆಜ್ಞಾಪಿಸಲ್ಪಟ್ಟ ಸಂಗತಿಯಲ್ಲಿ ಕಂಡುಬರುತ್ತದೆ (ಮತ್ತಾಯ 26:26-29; ಮಾರ್ಕ 14:22-25; ಲೂಕ 22:14-20). ಇದು ಆತನ ಮನಸ್ಸಿನಲ್ಲಿ ಮೂಲವಾಗಿ ಹುಟ್ಟಿತು. ಯಾವುದೇ ಗಣನೆಗೆ ಬಾರದ್ದು ಇಲ್ಲವೇ ಮಹತ್ವವಿಲ್ಲದ್ದು ಆತನ ಮನಸ್ಸಿನಲ್ಲಿ ಎಂದೂ ಹುಟ್ಟಲಿಲ್ಲ. ಯೇಸುವಿನ ದಿವಾರೋಹಣದ ನಂತರ ಆಯ್ಕೆಗೊಂಡ ಪೌಲನು ಕರ್ತನ ಭೋಜನಕ್ಕೆ ಸಂಬಂಧಿಸಿದ ಉದ್ದೇಶಗಳನ್ನು ಹೊಂದಿಕೊಂಡನು (1 ಕೊರಿಂಥ 11). ಆದಿ ಕ್ರೈಸ್ತರು ಅದರಲ್ಲಿ ಭಾಗವಹಿಸಿದರೆಂದು ಲೂಕನು ದಾಖಲೆ ಮಾಡಿದ್ದಾನೆ (ಅಪೊಸ್ತಲರ ಕೃತ್ಯ 2:42; 20:7). ದೇವರನ್ನು ಪ್ರೀತಿಸುವುದು ಅಂದರೆ ಆತನ ಆಜ್ಞೆಗಳನ್ನು ಕೈಗೊಳ್ಳುವುದು (1 ಯೋಹಾನ 5:3). ಕರ್ತನ ಭೋಜನದಲ್ಲಿ ಪಾಲುಗಾರನಾಗದೇ ಇರುವವನು ದೇವರನ್ನು ಪ್ರೀತಿಸುವನೆಂದು ಹೇಳಬಹುದೋ? ಒಬ್ಬನು ಅದರಲ್ಲಿ ಭಾಗ ತೆಗೆದು ಕೊಳ್ಳದಿದ್ದರೆ ಅವನು ದೇವರಿಗೆ ವಿಧೇಯನಾಗಿರುವನೆಂದು ಹೇಳಬಹುದೋ? ನಂಬಿಗಸ್ಥ ಕ್ರೈಸ್ತನಾಗಿರುವದಕ್ಕೆ ಒಬ್ಬನು ಕರ್ತನ ಭೋಜನದಲ್ಲಿ ಪಾಲುಗಾರನಾಗಬೇಕು.

ಎರಡನೆಯದು, ಕರ್ತನ ಭೋಜನದಲ್ಲಿ ಪಾಲುಗಾರನಾಗುವವನು, ಅರ್ಹತೆಯುಳ್ಳ

ಪಾಲುಗಾರನಾಗಿರತಕ್ಕದ್ದು. ಸ್ವೀಕಾರ ಯೋಗ್ಯವಾಗಿ ಪ್ರತಿಯೊಬ್ಬನೂ ಕರ್ತನ ಭೋಜನದಲ್ಲಿ ಪಾಲುಗಾರನಾಗುವನು. ಯಾರು ಪಾಲುತೆಗೆದು ಕೊಳ್ಳಬಹುದು? ಯೇಸು ತನ್ನ ರಾಜ್ಯದಲ್ಲಿ ಮೇಜನ್ನಿಡುವುದಾಗಿ ವಾಗ್ದಾನ ಮಾಡಿದನು (ಲೂಕ 22:29, 30). ಇದರ ಅರ್ಥ ರಾಜ್ಯದ ನಂಬಿಗಸ್ಥ ಪೌರರಿಗೆ ಮಾತ್ರವೇ ಪಾಲು ತೆಗೆದು ಕೊಳ್ಳುವ ಹಕ್ಕು ಇರುವದೆಂದಾಗುತ್ತದೆ. ರಾಜ್ಯವನ್ನು ಪ್ರವೇಶಿಸಲು ಒಬ್ಬನು ಮಾರ್ಪಾಟಾಗಲೇ ಬೇಕು: ಇನ್ನೊಂದು ವಾಕ್ಯದಲ್ಲಿ ಹೇಳಲ್ಪಟ್ಟಂತೆ, ಅವನು ನೂತನವಾಗಿ ಜನಿಸಿರಬೇಕು (ಮತ್ತಾಯ 18:5; ಯೋಹಾನ 3:3-5). ಮಾರ್ಪಡುವಿಕೆಯ ನಿಯಮವು ಹೊಸ ಒಡಂಬಡಿಕೆಯಲ್ಲಿ ಬಹಳ ಸರಳವಾಗಿ ಹೇಳಲ್ಪಟ್ಟಿದೆ (ಮತ್ತಾಯ 28:19, 20; ಮಾರ್ಕ 16:15, 16; ಲೂಕ 24:46, 47; ಅಪೊಸ್ತಲರ ಕೃತ್ಯ 2:38). ಈ ಶರತ್ತುಗಳನ್ನು ಒಬ್ಬ ವ್ಯಕ್ತಿ ಕೈಕೊಂಡಾಗ ಅವನು ಹೊಸದಾಗಿ ಹುಟ್ಟುವನು, ಮಾರ್ಪಾಟು ಹೊಂದುವನು ಮತ್ತು ರಾಜ್ಯದ ಪೌರನಾಗುವನು. ರಾಜ್ಯದ ಪ್ರಜೆಗಳು ಮಾತ್ರವೇ ರಾಜ್ಯದ ಹಕ್ಕುಗಳಿಗೆ ಬಾಧ್ಯರಾಗುವರು.

ಇದಕ್ಕೆಕೂಡಿಸಿ, ಭೋಜನವು ಸರಿಯಾದ ಸಂದರ್ಭದಲ್ಲಿ ಭುಜಿಸ ಬೇಕು. ವಾರದ ಮೊದಲನೆಯ ದಿನದಂದು ಆದಿ ಶಿಷ್ಯರು ಕರ್ತನ ಭೋಜನ ಮಾಡಿದರು (ಅಪೊಸ್ತಲರ ಕೃತ್ಯ 20:7). ಆದುದರಿಂದ ಆ ದಿನದಂದು ಭೋಜನ ಮಾಡಿದ ಉದಾಹರಣೆಗಳು ಹೊಸ ಒಡಂಬಡಿಕೆಯಲ್ಲಿ ನಮಗಿದೆ. ವಾರದ ಆ ದಿನವು ಯೇಸುವು ಸತ್ತವರೊಳ ಗಿಂದ ಎಬ್ಬಿಸಲ್ಪಟ್ಟ ದಿನವಾಗಿತ್ತು. ಹೀಗೆ ದೇವರು ದಿನವನ್ನೂ ಸ್ಮಾರಕ ಭೋಜನ ವನ್ನೂ ಒಂದಾಗಿ ಕೂಡಿಸಿದನು. ದೇವರು ಒಂದಾಗಿ ಕೂಡಿಸಿದ್ದನ್ನು ಮನುಷ್ಯನು ಬೇರೆ ಮಾಡಬಾರದು. "ಶುಭ ಶುಕ್ರವಾರ"ದಂದು ಇಲ್ಲವೇ ವಾರದ ಮೊದಲನೆಯ ದಿನವನ್ನು ಬಿಟ್ಟು ಬೇರೆ ದಿನದಂದು ಸತ್ಯದಲ್ಲಿ ಅಥವಾ ಸತ್ಯಕ್ಕನುಗುಣವಾಗಿ ಕರ್ತನ ಭೋಜನವನ್ನು ಭುಜಿಸಲಾಗದು. "ಕರ್ತನ ಭೋಜನವಿಲ್ಲದ ಕರ್ತನ ದಿನವು ಪರಿಮಳ ವಿಲ್ಲದ ಗುಲಾಬಿಯಂತೆ ಇದೆ, ಜೇನು ತುಪ್ಪವನ್ನು ಹೊರಗೆ ತೆಗೆದ ಜೇನು ಗೂಡಿನಂತೆ ಇದೆ" ಎಂದು ಹೇಳಲಾಗಿದೆ.

ಸ್ವೀಕಾರ ಯೋಗ್ಯವಾಗಿ ಕರ್ತನ ಭೋಜನದಲ್ಲಿ ಪಾಲುಗಾರನಾಗಲು ಬಯಸುವವನು ಕ್ರಮ ಪ್ರಕಾರವಾಗಿ ಭಾಗವಹಿಸುವವನಾಗಿರ ಬೇಕು. ಎಷ್ಟುಸಲ ಇದನ್ನು ಮಾಡಬೇಕು? "ವಾರದ ಮೊದಲನೆಯ ದಿನ" ಎಂಬ ಹೇಳಿಕೆಯು ಪ್ರತಿವಾರ ವೆಂದು ಹೇಳುತ್ತದೆ. "ಸಬ್ಬತ್ತ ದಿನವನ್ನು ಪವಿತ್ರವಾಗಿಟ್ಟುಕೊಳ್ಳುವದನ್ನು ಜ್ಞಾಪಕದಲ್ಲಿ ಇಟ್ಟು ಕೊಳ್ಳಿರಿ" (ವಿಮೋಚನಕಾಂಡ 20:8) ಎಂಬ ಆಜ್ಞೆಯು ಹಳೇ ಒಡಂಬಡಿಕೆಯಲ್ಲಿ ಇರುವದನ್ನು ಕಂಡುಕೊಳ್ಳುವೆವು. "ಪ್ರತೀ ಸಬ್ಬತು" ಎಂದು ಅದು ಹೇಳಲಿಲ್ಲ, ಆದರೆ ಅದೇ ಅದರ ಅರ್ಥ. "ವಾರದ ಮೊದಲನೆಯ ದಿನ" ಎಂಬ ಹೇಳಿಕೆಯು ಪ್ರತೀ ವಾರದ ಮೊದಲನೆಯ ದಿನದ ಆಚಾರವನ್ನು ಸೂಚಿಸುತ್ತದಲ್ಲವೇ?

ಮನುಷ್ಯನು ಯಾವಾಗಲೂ ಬದಲಾಗಿ ಇಟ್ಟು ಕೊಳ್ಳುವದನ್ನು ಬಯಸುತ್ತಾನೆ. ನಾದಾಬ, ಅಬೀಹು ಅವರನ್ನು ಜ್ಞಾಪಿಸಿಕೊಳ್ಳಿರಿ (ಯಾಜಕಕಾಂಡ 10). ಅವರು ಆಜ್ಞಾಪಿಸದೆ ಇದ್ದ ಬೇರೆ ಬೆಂಕಿಯನ್ನು ಬದಲಾಗಿ ತೆಗೆದು ಕೊಂಡದ್ದು ದೇವರ ಆರಾಧನೆಗೆ ಸ್ವೀಕಾರ ಯೋಗ್ಯವಾದದ್ದು ಆಗಿರಲಿಲ್ಲ. ನಾಮಾನನು ಗುಣಹೊಂದುವ ಮೊದಲು ಪರ್ಯಾಯವಾದದ್ದನ್ನು ಸೂಚಿಸಿದನು (2 ಅರಸು 5), ಫರಿಸಾಯರು ಸತ್ಯಕ್ಕೆ ಬದಲಾಗಿ ಮಾನವರ ಅನೇಕ ತತ್ವಗಳನ್ನು ಇಟ್ಟುಕೊಂಡದ್ದರಿಂದ ಅವರು ದೇವರಿಗೆ ಮೆಚ್ಚಿಕೆಯಾಗಿರಲಿಲ್ಲ (ಮತ್ತಾಯ 15:9).

ಕರ್ತನ ಭೋಜನವು ಮಾನವ ಪರ್ಯಾಯಗಳ ಕ್ಷೇತ್ರದಲ್ಲಿ ಬಹಳ ದುರುಪಯೋ

ಗದ ಸಂಗತಿಯಾಗಿತ್ತು, ರೊಟ್ಟಿ ಮತ್ತು ದ್ರಾಕ್ಷಾರಸಕ್ಕೆ ಪ್ರತಿಯಾಗಿ ಇತರ ವಸ್ತುಗಳನ್ನು ಕೆಲವರು ಪರ್ಯಾಯವಾಗಿ ತೆಗೆದು ಕೊಂಡಿದ್ದಾರೆ! ಈ ಪ್ರತ್ಯೇಕವಾದ ಸಾದೃಶ್ಯಗಳು ದೈವಿಕ ಅಧಿಕಾರದಿಂದ ಮೇಜಿನ ಮೇಲೆ ಇಡಲ್ಪಟ್ಟಿವೆ. ಇವುಗಳ ಬದಲಾಗಿ ಬೇರಾವು ದನ್ನೂ ಉಪಯೋಗಿಸಬಾರದು. ಕೆಲವರು ದಿನವನ್ನು ಬದಲಾಯಿಸಿಕೊಂಡಿದ್ದಾರೆ. ವಾರದ ಮೊದಲನೆಯ ದಿನವನ್ನು ಬಿಟ್ಟು ಬೇರೆ ದಿನದಂದು ಕರ್ತನ ಭೋಜನದಲ್ಲಿ ಭಾಗವಹಿಸುತ್ತಾರೆ. ಕೆಲವರು ಪ್ರತೀವಾರದ ಆಚರಣೆಯನ್ನು ಬಿಟ್ಟು ಬಿಟ್ಟು ವರ್ಷಕ್ಕೊಮ್ಮೆ, ಅರ್ಧ ವರ್ಷಕ್ಕೊಮ್ಮೆ ಇಲ್ಲವೇ ತ್ರೈಮಾಸಿಕ ಸ್ಮಾರಕವಾಗಿ ಆಚರಿಸುತ್ತಾರೆ. ಇತರ ವಿಷಯಗಳಂತೆ ಕರ್ತನ ಭೋಜನದೊಂದಿಗೂ ಇರುವುದು; ಪರ್ಯಾಯಗಳು ಕೆಡಿಸುತ್ತವೆ ಮತ್ತು ಹಾಳು ಮಾಡುತ್ತವೆ. ಭೋಜನವು "ಸತ್ಯದಿಂದಲು" ಇರಬೇಕು. ಪರ್ಯಾಯಗಳು ಆರಾಧನೆಯೊಳಗೆ ಪ್ರವೇಶಿಸುವಾಗ ಸತ್ಯವು ಅಗಲಿ ಹೋಗುತ್ತದೆ.

## ಆತ್ಮದಿಂದ

ಪರಿಶುದ್ಧ ಭೋಜನವನ್ನು ಅಪವಿತ್ರಗೊಳಿಸಿದ ಸದಸ್ಯರಿದ್ದ ಕ್ರಿಸ್ತನ ಸಭೆಗೆ, 1 ಕೊರಿಂಥ 11 ಬರೆಯಲ್ಪಟ್ಟಿತು. ಅವರು ಬಹಳ ತಪ್ಪಾದ ದಿನದಂದು ಆಚರಿಸು ತ್ತಿರಲಿಲ್ಲ. ಇಲ್ಲವೇ ವಾರದ ಆಚರಣೆಗಾಗಿ ವಿಶೇಷ ಸಂದರ್ಭದ ಸ್ಮಾರಕಗಳನ್ನು ಬದಲಾಯಿಸಿರಲಿಲ್ಲ. ಹೀಗಿದ್ದರೂ ಭೋಜನದ ಭಾವನೆಯನ್ನು ಬದಲಾಯಿಸಿದ್ದರು. ಕೊರಿಂಥದವರಿಗೆ ಬರೆದ ಪತ್ರದಲ್ಲಿ ಪೌಲನು ಆಚರಣೆಯ ಯೋಗ್ಯ ವಿಧಾನವನ್ನು ವಿವರಿಸಿದ್ದಾನೆ.

ಸ್ವಯಂ - ಪರೀಕ್ಷೆಯು ಅಗತ್ಯವಾಗಿದೆಯೆಂದು ಅವನು ಹೇಳಿದನು (ವ. 28). ನಾವು ಇತರರನ್ನು ಪರೀಕ್ಷಿಸ ಬೇಕಾಗಿಲ್ಲ. ಆದರೆ, ನಮ್ಮನ್ನೇ ಪರೀಕ್ಷಿಸಿಕೊಳ್ಳಬೇಕು. ಕರ್ತನ ಭೋಜನವು ಆಂತರ್ಯದ ಕಡೆಗೆ ತೋರಿಸುತ್ತದೆ.

ಕೊರಿಂಥದವರನ್ನು ಮತ್ತು ನಮ್ಮನ್ನು - ಕರ್ತನ ಭೋಜನದಲ್ಲಿ ಪಾಲುಗಾರರಾಗುವ ಮಾರ್ಗದ ಬಗ್ಗೆ ಜಾಗರೂಕರಾಗಿರ ಬೇಕೆಂದೂ ಸಹ ಎಚ್ಚರಿಸಿದ್ದಾನೆ. ಯಾಕಂದರೆ ಯೋಗ್ಯವಾಗಿ ಭುಜಿಸುವದರಿಂದ ಕರ್ತನ ಮರಣವು ಸಾರಲ್ಪಡುತ್ತದೆ (ವಚನಗಳು 26, 27). ಭುಜಿಸುವದರಿಂದ ನಾವು ಪ್ರಸಂಗಿಸುತ್ತೇವೆ. "ಅಯೋಗ್ಯವಾದ," ಅಕ್ರಮವಾದ ರೀತಿಯಲ್ಲಿ ತಿನ್ನದಂತೆ ಪ್ರತಿಯೊಬ್ಬರೂ ಬಹಳ ಎಚ್ಚರಿಕೆ ವಹಿಸತಕ್ಕದ್ದು. ಭಕ್ತಿಭಾವದವರೂ ಗೌರವಿಸುವವರೂ ಆಗಿರೋಣ. ಮಾತುಗಾರಿಕೆಯಿಂದ ಭಾಗವಹಿಸುವ ಕೆಲವರ ನಡತೆಯು ಅಸಹ್ಯವಾದದ್ದಾಗಿದೆ, ಕರ್ತನ ಭೋಜನವು, ಬಾಹ್ಯದ ಕಡೆಗೆ ತೋರಿಸುತ್ತದೆ.

ಕ್ರಿಸ್ತನು ಸ್ಥಾಪಿಸಿದ ಸ್ಮಾರಕ ಭೋಜನವು ನಮ್ಮ ಮನಸ್ಸಾಕ್ಷಿಗಳನ್ನು ಹಿಂದಕ್ಕೆ ಒಯ್ಯಬೇಕು. "ನನ್ನ ನೆನಪಿಗೋಸ್ಕರವಾಗಿ" (ವ. 25). ಕಲ್ವಾರಿಯ ದುಃಖದ ಸಂಗತಿಯ ಕಡೆಗೆ ನಮ್ಮ ಮನಸ್ಸುಗಳು ಹಿಂದಿರುಗಿ ಹೋಗಬೇಕು. ವಿಶ್ವಾಸದ ಕಣ್ಣಿನಿಂದ ಕ್ರೈಸ್ತನ ಮನಸ್ಸು ಮಧ್ಯದಲ್ಲಿಯ ಶತಮಾನಗಳ ಮೂಲಕ ಹಿಂದೆ ಹೋಗುತ್ತದೆ. ನಮ್ಮ ಪಾಪಗಳಿಗಾಗಿ ಕ್ರಿಸ್ತನು ಸಾಯುವದನ್ನು ಅದು ನೋಡುತ್ತದೆ; ಕರ್ತನ ಭೋಜನವು ಹಿಂದಕ್ಕೆ ತೋರಿಸುತ್ತದೆ.

ರೊಟ್ಟಿಯನ್ನು ತಿನ್ನುವುದು ಮತ್ತು ಪಾತ್ರೆಯಲ್ಲಿ ಕುಡಿಯುವುದು "ಆತನು ಬರುವವರೆಗೆ" ಕರ್ತನ ಮರಣವನ್ನು ಪ್ರಕಟಿಸುವುದಾಗಿದೆ ಎಂದು ಪೌಲನು ಹೇಳಿದ್ದಾನೆ (ವ. 26). ಕರ್ತನ ಭೋಜನದಲ್ಲಿ ಪಾಲುಗಾರರಾಗುವದರಿಂದ ಕ್ರೈಸ್ತನು ಕ್ರಿಸ್ತನ ಎರಡನೆಯ

ಬರೋಣದಲ್ಲಿ ತನ್ನ ನಂಬಿಕೆಯನ್ನು ಪ್ರಕಟಿಸುತ್ತಾನೆ. "ಆತನು ಬರುವ ವರೆಗೆ" ಇದು ಮಾಡಲ್ಪಡಬೇಕು. ಪ್ರತೀ ವಾರ ಕರ್ತನ ಮೇಜನ್ನು ಏರ್ಪಡಿಸುವ ಹಂಗಿನಿಂದ ಸಭೆಯನ್ನು ಬಿಡುಗಡೆ ಮಾಡುವ ಒಂದು ಸಂಗತಿಯು ಕರ್ತನ ಬರೋಣವು ಎಂದು ಹೇಳಲ್ಪಟ್ಟಿದೆ! ಕರ್ತನ ಭೋಜನವು ಭವಿಷ್ಯದ ಕಡೆಗೆ ತೋರಿಸುತ್ತದೆ.

## ಮುಕ್ತಾಯ

ಕೊರಿಂಥದಲ್ಲಿಯ ಅನೇಕರು ಆತ್ಮಿಕವಾಗಿ ಬಲಹೀನರೂ ರೋಗಿಗಳೂ ಆಗಿದ್ದರು. ಯಾಕಂದರೆ ಅವರು ಕರ್ತನ ಭೋಜನವನ್ನು ಅಯೋಗ್ಯವಾಗಿ ಆಚರಿಸಿದ್ದರು. ಸಂಶಯವಿಲ್ಲದೇ, ಅದೇ ಕಾರಣಕ್ಕಾಗಿ ಕ್ರಿಸ್ತನ ಸಭೆಯ ಸದಸ್ಯರಲ್ಲಿ ಅನೇಕರು ಆತ್ಮಿಕವಾಗಿ ಶ್ರಮೆಹೊಂದುತ್ತಿರುವರು. ಆತ್ಮದಿಂದಲು ಮತ್ತು ಸತ್ಯದಿಂದಲು ಕರ್ತನ ಭೋಜನವನ್ನು ಆಚರಿಸುವದರಲ್ಲಿ ಜಾಗರೂಕರಾಗಿರೋಣ.

© 2009 Truth for Today